ಭಾರತೀಯ ಆರ್ಥಿಕವ್ಯವಸ್ಥೆಯ ಮೇಲಿನ ಹೊಸ ಆಕ್ರಮಣ ?

# ಹಲಾಲ್ ಜಿಹಾದ್ ?

## ಗ್ರಂಥದ ಅನುಕ್ರಮಣಿಕೆ


೧. 'ಹಲಾಲ್' ಎಂದರೇನು ? ೭

೨. 'ಹಲಾಲ್' ಚಳವಳಿಯ ಉದ್ದೇಶ ೧೩

೩. 'ಹಲಾಲ್' ಪರಿಕಲ್ಪನೆಯ ಬೆಳವಣಿಗೆಯ ಇತಿಹಾಸ ೧೩

೪. 'ಹಲಾಲ್ ಆರ್ಥಿಕವ್ಯವಸ್ಥೆ' : ಸ್ವರೂಪ, ವ್ಯಾಪ್ತಿ ಮತ್ತು ಪ್ರಚಾರ ೧೬

೫. 'ಹಲಾಲ್ ಆರ್ಥಿಕವ್ಯವಸ್ಥೆ'ಯ ಆರ್ಥಿಕ ಆಧಾರ 'ಹಲಾಲ್ ಪ್ರಮಾಣಪತ್ರ (ಸರ್ಟಿಫಿಕೇಟ್)' ೩೫

೬. 'ಹಲಾಲ್ ಪ್ರಮಾಣಪತ್ರ'ದ ನಿರರ್ಥಕತೆ ! ೪೨

೭. 'ಹಲಾಲ್ ಆರ್ಥಿಕವ್ಯವಸ್ಥೆ'ಯ ದುಷ್ಪರಿಣಾಮಗಳು ೪೮

೮. 'ಹಲಾಲ್ ಆರ್ಥಿಕವ್ಯವಸ್ಥೆ' ಮತ್ತು 'ಜಿಹಾದ್ ಭಯೋತ್ಪಾದನೆ'ಗಳ ನಂಟು ! ೫೧

೯. 'ಹಲಾಲ್ ಆರ್ಥಿಕವ್ಯವಸ್ಥೆ'ಯ ಬಗ್ಗೆ ಹಿಂದೂಗಳ ಯೋಗ್ಯ ನಿಲುವು ಮತ್ತು ಕೃತಿ ! ೫೮

೧೦. 'ಹಲಾಲ್ ಅರ್ಥವ್ಯವಸ್ಥೆ'ಗೆ ದೇಶವಿದೇಶಗಳಲ್ಲಾಗುತ್ತಿರುವ ವಿರೋಧ ೬೮

೧೧. 'ಹಲಾಲ್ ಆರ್ಥಿಕವ್ಯವಸ್ಥೆ'ಯ ವಿರುದ್ಧ 'ಹಿಂದೂ ಜನಜಾಗೃತಿ ಸಮಿತಿ'ಯ ಹೋರಾಟ ಮತ್ತು ಯಶಸ್ಸು ! ೭೬

೧೨. 'ಹಲಾಲ್'ನ ಮೂಲಕ ನಡೆಯುತ್ತಿರುವ 'ಆರ್ಥಿಕ ಜಿಹಾದ್'ನ ವಿರುದ್ಧ ಹೋರಾಡಿರಿ ! ೮೪


**ಸೂಚನೆ** 'ಧಾರ್ಮಿಕತೆಯಿಂದ ಆರ್ಥಿಕವ್ಯವಸ್ಥೆಯ ಮೇಲಾಗುವ ಪರಿಣಾಮ'ದ ಸಂದರ್ಭದಲ್ಲಿನ ಸಂಶೋಧನೆ ಮತ್ತು ಅಧ್ಯಯನವನ್ನು ಜನರೆದುರು ಮಂಡಿಸಬೇಕು, ಇದರಿಂದ ದೇಶದ ಆರ್ಥಿಕವ್ಯವಸ್ಥೆ ಸದೃಢವಾಗಬೇಕು ಎಂಬುದೇ ಈ ಗ್ರಂಥದ ಉದ್ದೇಶವಾಗಿದೆ. ಯಾರದೇ ಧಾರ್ಮಿಕ ಭಾವನೆಯನ್ನು ನೋಯಿಸುವುದು ಅಥವಾ ವೈಮನಸ್ಸು ಉಂಟು ಮಾಡುವುದು ಇದರ ಹಿಂದಿನ ಉದ್ದೇಶವಲ್ಲ.

# ಗ್ರಂಥದ ಮನೋಗತ

'ಸುಖಸ್ಯ ಮೂಲಂ ಧರ್ಮಃ । ಧರ್ಮಸ್ಯ ಮೂಲಮರ್ಥಃ ।' (ಚಾಣಕ್ಯ ನೀತಿಸೂತ್ರ, ಅಧ್ಯಾಯ ೧), ಅಂದರೆ 'ಸುಖದ ಮೂಲವು ಧರ್ಮ ಮತ್ತು ಧರ್ಮದ ಮೂಲವು ಅರ್ಥ (ಧನಸಂಪತ್ತು) ವಾಗಿದೆ'. ಈ ರೀತಿ ಸುಖ ಮತ್ತು ಧರ್ಮದ ದೃಷ್ಟಿಯಿಂದ 'ಅರ್ಥ'ದ ಮಹತ್ವವನ್ನು ಹೇಳಲಾಗಿದೆ. ಧರ್ಮಶಾಸ್ತ್ರಕ್ಕನುಸಾರ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ನಾಲ್ಕು ಪುರುಷಾರ್ಥಗಳಲ್ಲೂ ಅರ್ಥವನ್ನು ಸೇರಿಸಲಾಗಿದೆ. ಇಂದಿನ ಕಾಲದಲ್ಲಿ ಧನಸಂಪನ್ನ ವ್ಯಕ್ತಿಯೇ ಪ್ರಭಾವಶಾಲಿಯಾಗಿರುತ್ತಾನೆ. ರಾಜಕಾರಣದಿಂದ ಹಿಡಿದು ದೇಶದ ನೀತಿನಿಯಮಗಳನ್ನು ನಿರ್ಧರಿಸುವ ತನಕದ ವ್ಯವಸ್ಥೆಯಲ್ಲಿ ಇಂತಹ ವ್ಯಕ್ತಿಯ ಪ್ರಭಾವವಿರುತ್ತದೆ, ಹಾಗೆಯೇ ಧನಸಂಪನ್ನತೆಯಿಂದಲೇ ಅಮೇರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಿಗೆ ಮುಂದುವರೆದ ದೇಶಗಳು ಎಂದು ಹೇಳಲಾಗುತ್ತದೆ ಮತ್ತು ಇದೇ ಕಾರಣದಿಂದ ಅವು ಅನೇಕ ದೇಶಗಳ ಮೇಲೆ ಒತ್ತಡತಂತ್ರವನ್ನು ಉಪಯೋಗಿಸುತ್ತವೆ ! ಆದ್ದರಿಂದಲೇ ಅರ್ಥಕಾರಣಕ್ಕೆ (ಆರ್ಥಿಕತೆಗೆ) ತುಂಬಾ ಮಹತ್ವವಿದೆ. ಅದರಲ್ಲೂ ಜಗತ್ತಿನ ವಿನಾಶಕ್ಕಾಗಿ ತಯಾರಿರುವ ಜಿಹಾದಿಗಳ ಕೈಗೆ ಈ ಆರ್ಥಿಕತೆ ಸಿಕ್ಕರೆ ಏನಾಗಬಹುದು ? ಸದ್ಯದ ಪರಿಸ್ಥಿತಿಯಲ್ಲಿ ಈ ಭಯಕ್ಕೆ ಮುಖ್ಯ ಕಾರಣವೆಂದರೆ, ಜಗತ್ತಿನಲ್ಲಿ ಎಲ್ಲಕ್ಕಿಂತ ವೇಗವಾಗಿ ಬೆಳೆಯುತ್ತಿರುವ ಇಸ್ಲಾಮಿ ಶರೀಯತ್‌ನ ಮೇಲಾಧಾರಿತ 'ಹಲಾಲ್ ಆರ್ಥಿಕವ್ಯವಸ್ಥೆ' !

ಶರೀಯತ್ ಆಧಾರಿತ 'ಇಸ್ಲಾಮಿಕ್ ಬ್ಯಾಂಕ್'ಗಳಿಗೆ ಅನೇಕ ದೇಶಗಳಲ್ಲಿ ವಿರೋಧವಾದರೂ, ಗ್ರಾಹಕರ ಹಕ್ಕಿನಿಂದ, ಹಾಗೆಯೇ ಕಟ್ಟರ್ ಧರ್ಮಪಾಲನೆಯ ಆಗ್ರಹದಿಂದ 'ಹಲಾಲ್ ಆರ್ಥಿಕ ವ್ಯವಸ್ಥೆ'ಯು ಇಂದು ಬಲಿಷ್ಠವಾಗುತ್ತಿರುವುದು ಕಂಡುಬರುತ್ತಿದೆ. ಮುಸಲ್ಮಾನರು ಪ್ರತಿಯೊಂದು ಪದಾರ್ಥ ಮತ್ತು ವಸ್ತುಗಳನ್ನು ಅಧಿಕೃತ, ಅಂದರೆ 'ಹಲಾಲ್' ಆಗಿರಬೇಕೆಂಬ ಬೇಡಿಕೆಯನ್ನು ಮಾಡುತ್ತಿದ್ದಾರೆ. ಆದುದರಿಂದ 'ಹಲಾಲ್ ಸರ್ಟಿಫಿಕೇಟ್' ಅನಿವಾರ್ಯವಾಗಿದೆ. ಆಶ್ಚರ್ಯವೆಂದರೆ 'ಸೆಕ್ಯುಲರ್' ಭಾರತದಲ್ಲಿನ ಸರಕಾರಿ ಕಂಪನಿಗಳಲ್ಲೂ 'ಹಲಾಲ್ ಸರ್ಟಿಫಿಕೇಟ್'ನ್ನು ಕಡ್ಡಾಯ ಮಾಡಲಾಗಿದೆ. ದೇಶದಲ್ಲಿ ಕೇವಲ ೧೫ ಪ್ರತಿಶತವಿರುವ ಅಲ್ಪಸಂಖ್ಯಾತ ಮುಸಲ್ಮಾನ ಸಮಾಜಕ್ಕೆ ಇಸ್ಲಾಮಿಗನುಸಾರ 'ಹಲಾಲ್' ಮಾಂಸವನ್ನು ಭಕ್ಷಣೆ ಮಾಡಬೇಕಾಗಿದೆ ಎಂದು ಉಳಿದ ಜನರ ಮೇಲೂ ಅದನ್ನು ಹೇರಲಾಗುತ್ತಿದೆ. ಈಗಂತೂ ಈ 'ಹಲಾಲ್ ಸರ್ಟಿಫಿಕೇಟ್' ಕೇವಲ ಮಾಂಸಕ್ಕಷ್ಟೇ ಸೀಮಿತವಾಗಿರದೇ ಖಾದ್ಯಪದಾರ್ಥಗಳು, ಸೌಂದರ್ಯವರ್ಧಕಗಳು, ಔಷಧ, ಆಸ್ಪತ್ರೆ, ಗೃಹನಿರ್ಮಾಣ, ಮಾಲ್, ಪ್ರವಾಸ ಮುಂತಾದ ಕ್ಷೇತ್ರಗಳಲ್ಲೂ ಪ್ರಾರಂಭವಾಗಿದೆ. ಇಸ್ಲಾಮ್ ದೇಶಗಳಿಗೆ ಕಳುಹಿಸುವ ಪ್ರತಿಯೊಂದು ವಸ್ತುವಿಗಂತೂ 'ಹಲಾಲ್ ಸರ್ಟಿಫಿಕೇಟ್' ಕಡ್ಡಾಯವಾಗಿದೆ. ಇಂದು

‘ಮ್ಯಾಕ್‌ಡೊನಾಲ್ಡ್’ ನಂತಹ ವಿದೇಶಿ ಕಂಪನಿಗಳು ಹಿಂದೂ ಬಹುಸಂಖ್ಯಾತ ಭಾರತದಲ್ಲಿ ಶೇ. ೧೦೦ ರಷ್ಟು ‘ಹಲಾಲ್’ ಪದಾರ್ಥಗಳನ್ನು ಮಾರಾಟ ಮಾಡಿ ಹಿಂದೂ ಗ್ರಾಹಕರ ಧಾರ್ಮಿಕ ಹಕ್ಕನ್ನು ಅವಮಾನಿಸುತ್ತಿವೆ ! ಇದರಿಂದ ನಿರ್ಮಾಣವಾದ ‘ಹಲಾಲ್ ಆರ್ಥಿಕವ್ಯವಸ್ಥೆ’ಯು ವಿಶ್ವದೆಲ್ಲೆಡೆ ವರ್ಚಸ್ಸನ್ನು ಮೂಡಿಸಿ ಕಡಿಮೆ ಕಾಲಾವಧಿಯಲ್ಲಿಯೇ ೨ ಟ್ರಿಲಿಯನ್ ಅಮೇರಿಕನ್ ಡಾಲರ್ಸ್‌ಗಳನ್ನು ತಲುಪಿದೆ.

ಇಂದು ಜಗತ್ತಿನೆಲ್ಲೆಡೆ ‘ಹಲಾಲ್ ಆರ್ಥಿಕವ್ಯವಸ್ಥೆ’ಯನ್ನು ಬಹಿರಂಗವಾಗಿ ಮತ್ತು ದೊಡ್ಡ ಪ್ರಮಾಣದಲ್ಲಿ ವಿರೋಧಿಸಲಾಗುತ್ತಿದೆ. ಆಸ್ಟ್ರೇಲಿಯಾದ ಸಂಸತ್ತಿನಲ್ಲಿ ಹೆಚ್ಚುತ್ತಿರುವ ಮೂಲಭೂತವಾದಕ್ಕೆ ‘ಹಲಾಲ್ ಆರ್ಥಿಕವ್ಯವಸ್ಥೆ’ ಬಲ ನೀಡುತ್ತಿದೆ ಎಂದು ಆರೋಪಿಸಲಾಗಿದ್ದು, ಅದರ ಮೇಲೆ ನಿರ್ಬಂಧ ಹೇರುವ ಬೇಡಿಕೆಯನ್ನೂ ಮಾಡಲಾಗಿದೆ.

ಯಾವಾಗ ಪಂಥದ ಮೇಲಾಧಾರಿತ ಆರ್ಥಿಕವ್ಯವಸ್ಥೆ ನಿರ್ಮಾಣವಾಗುತ್ತದೆಯೋ, ಆಗ ದೇಶದ ವಿವಿಧ ವ್ಯವಸ್ಥೆಗಳ ಮೇಲೆ ಖಂಡಿತವಾಗಿಯೂ ಅದರ ಪರಿಣಾಮ ವಾಗುತ್ತದೆ. ಇಲ್ಲಂತೂ ‘ಶರೀಯತ್’ನ ಮೇಲಾಧಾರಿತ ಒಂದು ಆರ್ಥಿಕವ್ಯವಸ್ಥೆ ನಿರ್ಮಾಣವಾಗುತ್ತಿದೆ. ಇದರಿಂದ ‘ಸೆಕ್ಯುಲರ್’ ಭಾರತದ ಮೇಲೂ ಖಂಡಿತವಾಗಿ ಪರಿಣಾಮವಾಗುತ್ತದೆ. ಈ ದೃಷ್ಟಿಯಿಂದ ‘ಭವಿಷ್ಯದಲ್ಲಿ ಸ್ಥಳೀಯ ವ್ಯಾಪಾರಿಗಳಿಗೆ, ಪಾರಂಪರಿಕ ವ್ಯಾಪಾರ ಮಾಡುವವರಿಗೆ, ವಾಣಿಜ್ಯೋದ್ಯಮಿಗಳಿಗೆ ಹಾಗೆಯೇ ಕೊನೆಯಲ್ಲಿ ರಾಷ್ಟ್ರಕ್ಕೆ ಯಾವ ಅಪಾಯವುಂಟಾಗುತ್ತದೆ’ ಎಂಬುದರ ವಿಚಾರ ಮಾಡುವುದು ಆವಶ್ಯಕವಾಗಿದೆ. ಇಂತಹ ಸಮಯದಲ್ಲಿ ಭಾರತವು ಸಕಾಲದಲ್ಲಿ ಜಾಗೃತ ವಾಗಬೇಕು ! ಭಾರತ ಸರಕಾರ ‘ಹಲಾಲ್ ಸರ್ಟಿಫಿಕೇಟ್’ ಕೊಡುವ ಇಸ್ಲಾಮಿ ಸಂಸ್ಥೆಗಳು ‘ಸರ್ಟಿಫಿಕೇಟ್’ನ ಮಾಧ್ಯಮದಿಂದ ಸಂಗ್ರಹಿಸಲಾದ ಹಣವನ್ನು ಹೇಗೆ ಬಳಸುತ್ತವೆ’ ಎಂಬುದರ ಸಮಗ್ರ ತನಿಖೆ ನಡೆಸಬೇಕು. ‘ಸೆಕ್ಯುಲರ್’ ಭಾರತದಲ್ಲಿ ‘ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ’ (FSSAI) ದಂತಹ ಸರಕಾರಿ ಸಂಸ್ಥೆಗಳಿರು ವಾಗ ‘ಹಲಾಲ್ ಸರ್ಟಿಫಿಕೇಟ್’ ಕೊಡುವ ಇಸ್ಲಾಮಿ ಸಂಸ್ಥೆಗಳ ಆವಶ್ಯಕತೆ ಏನು ?

ಈ ಹಿನ್ನೆಲೆಯಲ್ಲಿ ಈ ಗ್ರಂಥವನ್ನು ಒಂದು ಸಮಾಜದ ಧಾರ್ಮಿಕ ಶ್ರದ್ಧೆಯ ಬಗ್ಗೆ ಅಥವಾ ಅವರ ಧಾರ್ಮಿಕ ಹಕ್ಕಿನ ಬಗ್ಗೆ ಪ್ರಶ್ನೆ ಎತ್ತಲು ಅಥವಾ ಅವರಿಗೆ ಅವಮಾನ ಮಾಡಲು ಸಂಕಲನ ಮಾಡಿರದೇ, ಭಾರತದಲ್ಲಿನ ೧೦೦ ಕೋಟಿ ಹಿಂದೂ ಗ್ರಾಹಕರ ಹಿತಕ್ಕೆ ಮನ್ನಣೆ ಸಿಗಲು, ಹಾಗೆಯೇ ಅವರಿಗೆ ಗ್ರಾಹಕರ ಹಕ್ಕಿನ ಅರಿವು ಮಾಡಿ ಕೊಡಲು ಮತ್ತು ರಾಷ್ಟ್ರದ ಎದುರಿನ ಒಂದು ಸಂಕಟದ ಮಾಹಿತಿ ನೀಡಲು ಸಂಕಲನ ಮಾಡಲಾಗಿದೆ ! ‘ಈ ಗ್ರಂಥವನ್ನು ಓದಿ ಹಿಂದೂ ಗ್ರಾಹಕರು ಜಾಗೃತರಾಗಬೇಕು’ ಎಂದು ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**